5. ಜೈನಾಪುರ ಪುನರ್ವಸತಿ ಕೇಂದ್ರ

1.	ಶಾಲಾ ಆವರಣದಲ್ಲಿ ಶೌಚಾಲಯ ಹಾಗೂ ಸಾಂಸ್ಕೃತಿಕ ವೇದಿಕೆ ನಿರ್ಮಾಣ	2.	ಶಿಕ್ಷಕರ ವಸತಿ ಗೃಹ
3.	ಅಂಗನವಾಡಿ	4.	ಪ್ರೌಢಶಾಲಾ ಕಟ್ಟಡ
5.	ಪ್ರಾಥಮಿಕ ಶಾಲೆ	6.	ಧೋಬಿ ಘಾಟ್
7.	ಮುಳುಗಡೆಯಾಗದೇ ಬಾಕಿ ಇರುವ ಹೊಲಗಳಿಗೆ ರಸ್ತೆ ನಿರ್ಮಾಣ		

2199 (3196) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಲಮಟ್ಟಿ ಜಲಾಶಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿರುವುದೇ;

ಆ) ವಿದ್ಯುತ್ ಉತ್ಪಾದನಾ ಯೋಜನೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು ಮತ್ತು ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ;

ಇ) ಯೋಜನೆಯಿಂದ ಯಾವ ಜಿಲ್ಲೆಗಳಿಗೆ ವಿದ್ಯುತ್ ಪೂರೈಕೆ ಮಾಡಲಾಗುವುದು;

ಈ) ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಎಂದು ಪೂರ್ಣಗೊಳಿಸಿ ವಿದ್ಯುತ್ ಪೂರೈಕೆ ಮಾಡಲಾಗುವುದು;

ಉ) ಇದಕ್ಕಾಗಿ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು, ಯೋಜನೆಯನ್ನು ಸರ್ಕಾರ ಕೆ.ಪಿ.ಸಿ.ಎಲ್.ಗೆ 2001ರ ಇಸವಿಯಲ್ಲಿ ಹಂಚಿಕೆ ಮಾಡಲಾಗಿದೆ.

ಆ) 290 ಮೆ.ವ್ಯಾ. ಸಾಮರ್ಥ್ಯದ ಈ ಯೋಜನೆಯ ಕಾಮಗಾರಿಯನ್ನು ಮಾರ್ಚಿ 2002ರ ತಿಂಗಳಲ್ಲಿ ಪ್ರಾರಂಭಿಸಲಾಯಿತು.

ಇ) ಉತ್ಪಾದನೆಯಾಗುವ ವಿದ್ಯುತ್‌ನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ 220 ಕಿ.ವ್ಯಾ. ಗ್ರಿಡ್ ಮೂಲಕ ಪೂರೈಕೆ ಮಾಡಲಾಗುವುದು.

ಈ) ಮೊದಲಿನ ಮೂರು ಘಟಕಗಳ ಕಾಮಗಾರಿ (1 x 15 ಮೆ.ವ್ಯೆ. + 2 x 55 ಮೆ.ವ್ಯಾ.) ಮುಗಿದಿದ್ದು, ಅವುಗಳಿಂದ ಉತ್ಪಾದನೆ ಪ್ರಾರಂಭವಾಗಿದೆ. ಉಳಿದ ಮೂರು ಘಟಕಗಳ (3 ಸಂಖ್ಯೆ 55 ಮೆ.ವ್ಯಾ.) ಕೆಲಸ ತ್ವರಿತಗತಿಯಿಂದ ಸಾಗಿದ್ದು, ಜುಲೈ 2005ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಉ) ಇದಕ್ಕೆ ತಗಲುವ ಅಂದಾಜು ವೆಚ್ಚ ರೂ.674.38 ಕೋಟಿಗಳು

2200 (3197) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರದ ವಿಶ್ವ ಪ್ರಸಿದ್ಧ ಗೋಳಗುಮ್ಮಟವನ್ನು ಯುನೆಸ್ಕೋದ ವಿಶ್ವಪರಂಪರೆ ಪಟ್ಟಿಗೆ ಸೇರಿಸುವಂತೆ ರಾಜ್ಯ ಸರ್ಕಾರ ಪ್ರಸ್ತಾವನೆಯನ್ನು ಸಲ್ಲಿಸಿರುವುದೇ;

ಅ) ಈ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರ ಯಾವಾಗ ಸಲ್ಲಿಸಿರುವುದು;

ಇ) ವಿಶ್ವ ಪರಂಪರೆ ಪೆಟ್ಟಿಗೆ ಬಿಜಾಪುರದ ಗೋಳಗುಮ್ಮಟ ಸೇರುವಲ್ಲಿ ವಿಳಂಬವಾಗಿರಲು ಕಾರಣಗಳೇನು;

ಈ) ಈ ಪ್ರಸ್ತಾವನೆಯ ಬಗ್ಗೆ ಕೇಂದ್ರ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಉ) ಹಾಗಾದರೆ, ಯಾವ ನಿರ್ದಿಷ್ಟ ಕಾಲಾವಧಿಯೊಳಗೆ ವಿಶ್ವ ಪರಂಪರೆ ಪೆಟ್ಟಿಗೆ ಸೇರಿಸಿ ಅಭಿವೃದ್ಧಿಪಡಿಸಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಇಲ್ಲ. ಇಂತಹ ಯಾವುದೇ ಪ್ರಸ್ತಾವನೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಗೆ ಸಲ್ಲಿಸಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಈ ಬಗ್ಗೆ ಪರಿಶೀಲಿಸಲಾಗುವುದು.

ಉ) ಆದಷ್ಟು ಶೀಘ್ರವಾಗಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು.

2201 (3198) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವನಬಾಗೇವಾಡಿ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ನಿರ್ವಹಣೆಯಲ್ಲಿರುವ ರಸ್ತೆಗಳು ಯಾವುವು ಮತ್ತು ಅವುಗಳ ಉದ್ದವೆಷ್ಟು;

ಆ) ಈ ರಸ್ತೆಗಳಲ್ಲಿ ಸುಸ್ಥಿತಿಯಲ್ಲಿರುವ ಮತ್ತು ದುಸ್ಥಿತಿಯಲ್ಲಿರುವ ರಸ್ತೆಗಳು ಯಾವುವು;

ಇ) ದುಸ್ಥಿತಿಯಲ್ಲಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಈ) ಯಾವ ನಿರ್ದಿಷ್ಟ ಕಾಲಮಿತಿಯೊಳಗಾಗಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಅನುಬಂಧದಲ್ಲಿ ಲಗತ್ತಿಸಿದೆ.

ಇ) ಜಿಲ್ಲಾ ಮುಖ್ಯ ರಸ್ತೆಗಳನ್ನು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಅಡಿಯಲ್ಲಿ 2004–05ನೇ ಸಾಲಿನಲ್ಲಿ ಗುಂಡಿ ತುಂಬಿ ನಿರ್ವಹಣೆ ಮಾಡುವ ಕೆಲಸ ಕೈಗೊಳ್ಳಲಾಗಿದೆ. ಅತಿಯಾಗಿ ಹಾಳಾದ ರಸ್ತೆಗಳ ಖಡೀಕರಣ ಹಾಗೂ ಡಾಂಬರೀಕರಣ ಕೆಲಸವನ್ನು ಹೆಚ್ಚಿನ ಅನುದಾನದಲ್ಲಿ ಕೈಗೊಳ್ಳಲಾಗಿದೆ. ವಿವರವಾದ ಪಟ್ಟಿಯಲ್ಲಿ ವಿವರಿಸಲಾಗಿದೆ. ರಾಜ್ಯ ಹೆದ್ದಾರಿಗಳನ್ನು ಏಪ್ರಿಲ್ 2005 ರಿಂದ 3 ವರ್ಷದವರೆಗೆ ನಿರ್ವಹಣೆ ಮಾಡಲು ಕೆ.ಆರ್.ಡಿ.ಸಿ.ಎಲ್ ಮತಿಯಿಂದ ಕೈಗೊಳ್ಳಲು ಗುತ್ತಿಗೆ ಕರೆಯಲಾಗಿದೆ.

ಈ) ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಯನ್ನು ಈ ಸಾಲಿನಲ್ಲಿ ಕೈಗೆತ್ತಿಕೊಂಡಿದ್ದು, ಈ ಕಾರ್ಯಕ್ರಮವನ್ನು ಮಾರ್ಚ್ 2005ಕ್ಕೆ ಪೂರ್ಣಗೊಳಿಸಲಾಗುವುದು. ಇದಲ್ಲದೆ ರಾಜ್ಯ ಹೆದ್ದಾರಿಗಳನ್ನು ದಿನಾಂಕ:1.4.2005 ರಿಂದ 3 ವರ್ಷ ನಿರ್ವಹಣಾ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲಾಗುವುದು.